# ಗೇಲಿ ಮಾಡಿದರೆ ಹೀಗೆ ಮಾಡಬೇಕು

ಚುಟುಕು ಸಂದೇಶ ಕಳುಹಿಸಿ ಮೂರು ದಿನಗಳಾಗಿತ್ತು. ಆ ನಟರಿಂದ ಕೊನೆಗೂ ಫೋನ್ ಬಂತು– 'ಇನ್ನು ಅರ್ಧ ಗಂಟೆ ಟೈಮ್ ಇದೆ, ಬಂದು ಮಾತನಾಡಿಸಿಕೊಂಡು ಹೋಗಬಹುದು'. ಅವರಿದ್ದ ಸ್ಥಳ ತಲುಪಲು ಕನಿಷ್ಠ 45 ನಿಮಿಷ ಬೇಕಾಗಿದ್ದರಿಂದ ಅವರ ಸಂದರ್ಶನ ಪಡೆಯುವುದು ಅಸಾಧ್ಯವಾದ ಮಾತಾಯಿತು.

ಎರಡು ತಿಂಗಳು ಕಳೆದ ಮೇಲೆ ಅದೇ ನಟ ಮತ್ತೊಂದು ಫೋನ್ ಮಾಡಿ, 'ನೀವು ಸಂದರ್ಶನ ಮಾಡಲು ಬರಲೇ ಇಲ್ಲವಲ್ಲ' ವರದಿಗಾರರನ್ನು ಪ್ರಶ್ನಿಸಿದರು. ಏನು ಹೇಳಬೇಕೆಂದು ತೋಚದೆ ವರದಿಗಾರ ಸುಮ್ಮನಿದ್ದರೆ, ಅವರು ಜೋರಾಗಿ ನಗತೊಡಗಿದರು. ನಗು ಪೂರ್ತಿ ನಿಲ್ಲುವ ಮೊದಲೇ 'ಸಂದರ್ಶನ ಮಾಡುವುದಕ್ಕೆ ಏನು ಉಳಿದಿದೆ ಅಲ್ಲವೇ' ಎಂದು ತಮ್ಮನ್ನು ತಾವೇ ಗೇಲಿ ಮಾಡಿಕೊಂಡರು.

*

ಗಂಟೆ ಬೆಳಿಗ್ಗೆ ಹನ್ನೊಂದು. ಕನಸಿನ ಸೆಟ್‌ನಂಥ ಕಚೇರಿ. ಆಯತಾಕಾರದ ಟೀಪಾಯಿ. ಅದರ ಗಾಜಿನ ಹೊದಿಕೆಗಳ ನಡುವೆ ಕೆ.ಜಿ.ಗಟ್ಟಲೆ ತೂಗಬಹುದಾದ ಗೆಜ್ಜೆಗಳು. ತುಸು ದೂರದಲ್ಲಿ ಕಾಲವ ತಳ್ಳಿ ಸುಖಿಸುವಂತೆ ಕಾಣುತ್ತಿದ್ದ ಗಡಿಯಾರದ ವಿಚಿತ್ರ ಲೋಲಾಕು. ಎದುರಲ್ಲೊಂದು ಪುಟ್ಟ ಲ್ಯಾಪ್‌ಟಾಪ್. ಅದರಿಂದ ಧ್ವನಿ ಹೊಮ್ಮಿಸುವ ಸ್ಪೀಕರ್‌ಗಳಿಗೆ ಸಂಪರ್ಕ ಕೊಟ್ಟಿದ್ದ ಸಣ್ಣ ತಂತು. ಅಂಗಿಯ ಮೇಲಿನ ಮೂರು ಗುಂಡಿಗಳು ಬಿಚ್ಚಿದ್ದವು. ಹೊರಗೆ ಕಾಣಿಸಿಕೊಳ್ಳುವಾಗ ಸದಾ ತಲೆ ಮೇಲೆ ಇರುವ ಟೋಪಿ ಅಂದು ಇರಲಿಲ್ಲ. 'ಇದೇ, ನಾನು' ಎನ್ನುತ್ತಾ ಇದ್ದ ಕೆಲವೇ ಕೂದಲುಗಳ ತಲೆಯನ್ನು ನೇವರಿಸಿಕೊಂಡರು. ಮುಂದಿನ ಎರಡು ಮೂರು ಚಿತ್ರಗಳಿಗಾಗುವಷ್ಟು ಗೀತೆಗಳಿಗೆ ಅವರು ಮಟ್ಟುಗಳನ್ನು ಹಾಕಿದ್ದರು. ಟ್ರ್ಯಾಕ್ ಹಾಡುಗಾರರು ಅದಕ್ಕೆ ಹಾಡಿದ್ದೂ ಆಗಿತ್ತು. ಲ್ಯಾಪ್‌ಟಾಪ್‌ನ ಫೋಲ್ಡರ್‌ಗಳು ಬಿಚ್ಚಿಕೊಳ್ಳುತ್ತಾ ಹೋದಂತೆ ಹಾಡುಗಳ ತರಂಗ ಆ ಕಚೇರಿಯನ್ನು ತುಂಬಿಕೊಂಡಿತು. ತಾವು ನಾಯಕ ನಟನಾದಾಗ ಇದ್ದ ದಿನಗಳು, ತಮ್ಮ ನಿರ್ದೇಶನದ ಚೊಚ್ಚಿಲ ಚಿತ್ರದ ಮೊದಲ ಶಾಟನ್ನು ರಾಮ್‌ಗೋಪಾಲ್ ವರ್ಮ ಮೆಚ್ಚಿಕೊಂಡದ್ದು, ಹೊಸ ತಲೆಮಾರಿನವರು ಸುಮ್ಮಸುಮ್ಮನೆ ತಾವು ಮಾದರಿ ಎಂದುಕೊಂಡು ಚಿತ್ರೀಕರಿಸುವ ಕೆಟ್ಟ ದೃಶ್ಯಗಳು ಎಲ್ಲದರ ಕುರಿತೂ ಅವರು ಮುಕ್ತವಾಗಿ ಮಾತನಾಡಿದರು. ಚಿತ್ರರಂಗದಲ್ಲಿ ನಾಯಕತ್ವ ಎಷ್ಟು ಕಷ್ಟ ಎಂಬುದನ್ನೂ ಸ್ವಾನುಭವದಿಂದ ಹೇಳಿಕೊಂಡರು. ವರ್ಷಗಳಿಂದ ಉಜ್ಜುತ್ತಿರುವ ಸ್ಕ್ರಿಪ್ಟ್‌ಗೆ ಚಿತ್ರದ ರೂಪ ಕೊಡಲೇಬೇಕೆಂಬ ಹಟವನ್ನೂ ವ್ಯಕ್ತಪಡಿಸಿದರು.

*

'ಅವರು ಮೊದಲ ದೃಶ್ಯ ಕ್ಲಾಪ್ ಮಾಡಿದರೆ ಸಿನಿಮಾ ಗ್ಯಾರಂಟಿ ಸಕ್ಸಸ್' ಎಂಬುದು ಗಾಂಧೀನಗರದ ಅನೇಕರ ಅಭಿಪ್ರಾಯ. ಹಾಗಾಗಿ ಸಿನಿಮಾ ಮುಹೂರ್ತ ಸಮಾರಂಭಗಳಿಗೆ ಹೋಗುವುದು ಅವರಿಗೆ ಅಭ್ಯಾಸವಾಗಿಹೋಗಿದೆ. ತಮ್ಮನ್ನು ಲೇವಡಿ ಮಾಡಿಕೊಳ್ಳುವುದರ ಜೊತೆಗೆ ಹೊಸದಾಗಿ ಸಿನಿಮಾ ತೆಗೆಯಲು ಹೊರಟವರ ಕಾಲೆಳೆಯುವುದರಲ್ಲಿ ಅವರು ನಿಸ್ಸೀಮರು. ಪುತ್ರವ್ಯಾಮೋಹ ಅವರಿಗೂ ಇದೆ. ತಮ್ಮ ಕನಸನ್ನು ಮಗನಲ್ಲಿ ತುಂಬಿ, ತೆರೆಮೇಲೆ ಕಾಣಬೇಕೆಂಬುದು ಹೊಸ ಬಯಕೆ. ಸೋದರನನ್ನು ನಾಯಕನಾಗಿಸಲು ತಾವು ಪಟ್ಟ ಪಡಿಪಾಟಲಿನ ಅರಿವೂ ಅವರಿಗಿದೆ.

ಕನಸು ಕಾಣುತ್ತಲೇ ಇರಬೇಕು ಎನ್ನುವ ಈ ನಟ ಇನ್ನೂ ಅನೇಕರ ಪಾಲಿಗೆ ನಾಯಕ. ಅದು ಈ ಸಲದ ವಿಧಾನಸಭಾ ಚುನಾವಣೆಯ ಪ್ರಚಾರದಲ್ಲೂ ಸಾಬೀತಾಯಿತು.

– ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68